DW1

ಅಸಲ ದಾವಾ ನಂ. 349/2019

**ಮೆ॥ ಪ್ರಧಾನ ಸಿವ್ಹಿಲ್ ನ್ಯಾಯಾಧೀಶರ ನ್ಯಾಯಾಲಯ ಬಸವನ ಬಾಗೇವಾಡಿ**

**ಇವರ ನ್ಯಾಯಾಲಯದಲ್ಲಿ**

16 JUN 2026

1) ಬಸಪ್ಪ ತಂ: ತಿಪ್ಪಣ್ಣ ಮಾಳೂರ --ವಾದಿ

: ವಿರುದ್ಧ :

1) ಮಲ್ಲಪ್ಪ ತಂ: ಮಡಿವಾಳಪ್ಪ ಹುದ್ದಾರ @ ನಾಡಗೌಡ

ಹಾಗೂ ಇನ್ನಿಬ್ಬರು --ಪ್ರತಿವಾದಿಯರು

**ಸಿವ್ಹಿಲ್ ಪ್ರಕ್ರಿಯಾ ಸಂಹಿತೆ ಆದೇಶ 18 ನಿಯಮ 4 ರ ಕೆಳಗೆ 1ನೇ ಪ್ರತಿವಾದಿಯ**

**ನುಡಿಸಾಕ್ಷಿ ಸ್ವರೂಪದ ಪ್ರಮಾಣ ಪತ್ರ**

ಇದರಲ್ಲಿ ನಾನು ಮಲ್ಲಪ್ಪ ತಂ: ಮಡಿವಾಳಪ್ಪ ಹುದ್ದಾರ @ ನಾಡಗೌಡ ವಯಾ : 67 ಉ: ಒಕ್ಕಲುತನ ಸಾ॥ ಹೂವಿನ ಹಿಪ್ಪರಗಿ ತಾ॥ ಬಸವನ ಬಾಗೇವಾಡಿ ಹೀಗೆ ಸತ್ಯ ಪ್ರತಿಜ್ಞೆ ಮಾಡಿ ಹೇಳುತ್ತೇನಲ್ಲಾ.

ಸದರ ದಾವಾದಲ್ಲಿ ನಾನು 1 ನೇ ಪ್ರತಿವಾದಿ ಇರುತ್ತೇನೆ. ವಾದಿ ಹಾಗೂ ಉಳಿದ ಪ್ರತಿವಾದಿಯರ ಪರಿಚಯವಿದೆ ದಾವಾದ ಮಾಹಿತಿ ಇರುತ್ತದೆ.

ವಾದಿಯ ದಾವೆಯು ಖೊಟ್ಟಿ ವ, ಬನಾವಟಿಯಿಂದ ಕೂಡಿದ್ದು ಅದನ್ನು ನಾನು ಸಂಪೂರ್ಣವಾಗಿ ಅಲ್ಲಗಳೆಯುತ್ತೇನೆ ಅಂತಾ ತಿಳಿಯತಕ್ಕದ್ದು.

ನಾನು ಅಸಲರ್ಜಿಯಲ್ಲಿ ವಿಶೇಷವಾಗಿ ಒಪ್ಪದೆ ಇರುವ ಸಂಗತಿಗಳನ್ನು ಸಂಪೂರ್ಣವಾಗಿ ಅಲ್ಲಗಳೆಯುತ್ತೇನೆ ಅಂತಾ ತಿಳಿಯತಕ್ಕದ್ದು.

ವಾದಿಯು ವಾದ ಪತ್ರದ ಪ್ಯಾರಾ ನಂ. 2 ರಲ್ಲಿ ವಿವರಿಸಿದಂತೆ ವಾದಿಯು ಬಸವನ ಬಾಗೇವಾಡಿ ವಾದಿಯು ಬಸವನ ಬಾಗೇವಾಡಿ ತಾಲೂಕ ಪೈಕಿ ಹೂವಿನ ಹಿಪ್ಪರಗಿ ಗ್ರಾಮದ ಜಮೀನು ಸನಂ: 296/1 ಕ್ಷೇತ್ರ 5ಎ-36ಗುಂಟೆ ಆಕಾರ 5ರೂ-

No. of Corrections Nil
Sheristedar (Adm)

M. M. Nadagouda

43ಪೈಸೆ, ಇದರ ಮಾಲಿಕನು ಇರುತ್ತಾನೆ ಅನ್ನುವುದು ನಿಜವಿರುತ್ತದೆ. ಅದೇ ರೀತಿ ಮುಂದುವರೆದು ಹೂವಿನ ಹಿಪ್ಪರಗಿ ಗ್ರಾಮದ ಜಮೀನು ಸನಂ: 295/1 ಕ್ಷೇತ್ರ 3ಎ-08ಗುಂಟೆ ಆಕಾರ 3ರೂ-08ಪೈಸೆ ಇದು ನನ್ನ ಮಾಲ್ಕಿ ಹಕ್ಕಿನ ಜಮೀನ ಇರುತ್ತದೆ. ಸನಂ: 295/2 ಕ್ಷೇತ್ರ 4ಎ-00ಗುಂಟೆ ಆಕಾರ 5ರೂ-00ಪೈಸೆ, ಇದು 2ನೇ ಪ್ರತಿವಾದಿಯ ಮಾಲ್ಕಿ ಹಕ್ಕಿನ ಜಮೀನ ಇರುತ್ತದೆ. ಸನಂ: 295/3 ಕ್ಷೇತ್ರ 4ಎ-00ಗುಂಟೆ ಆಕಾರ 5ರೂ-00ಪೈಸೆ. ಇದು 3ನೇ ಪ್ರತಿವಾದಿಯ ಮಾಲ್ಕಿ ಹಕ್ಕಿನ ಜಮೀನ ಇರುತ್ತದೆ. ಅವುಗಳು ನಮ್ಮ ಮಾಲ್ಕಿ ಕಬ್ಜಾ ವಹಿವಾಟಿಯಲ್ಲಿರುತ್ತವೆ ಅನ್ನುವುದು ನಿಜವಿರುತ್ತದೆ. ಅದೇ ಪ್ಯಾರಾದಲ್ಲಿ ಮುಂದುವರೆದು ವಾದಪತ್ರದ ಜೊತೆ ಹಾಜರಪಡಿಸಿದ ಹಾತ ನಕಾಶೆಯಲ್ಲಿ ಹಾಗೂ ಪಿ.ಟಿ ಶೀಟದಲ್ಲಿ ತೋರಿಸಿದ ಅತಿಕ್ರಮಣವಾದ ಕ್ಷೇತ್ರವು 09ಗುಂಟೆ ಈ ದಾವೆಗೆ ಸಂಬಂಧಿಸಿರುತ್ತದೆ ಅಂತಾ ಹೇಳಿ ಬರೆಯಿಸಿದ ಸಂಗತಿ ಸಂಪೂರ್ಣ ಸುಳ್ಳು ಇರುತ್ತದೆ.

ವಾದಿಯು ವಾದ ಪತ್ರದ ಪ್ಯಾರಾ ನಂ. 3 ರಲ್ಲಿ ವಾದಿಯ ಜಮೀನಕ್ಕೆ ಹೊಂದಿ ದಕ್ಷಿಣ ಭಾಗಕ್ಕೆ ನಮ್ಮ ಮಾಲ್ಕಿ ಹಕ್ಕಿನ 1 ರಿಂದ 3 ಪಟ್ಟಿಗಳು ಇರುತ್ತವೆ ಅನ್ನುವುದು ನಿಜವಿರುತ್ತದೆ. ಮುಂದುವರೆದು ವಾದಿಯು ತನ್ನ ಮಾಲ್ಕಿ ಹಕ್ಕಿನ ಜಮೀನದ ಕ್ಷೇತ್ರವು ಕಡಿಮೆ ಆದ ಕಾರಣ ಅದಕ್ಕೆ ಸಂಶಯಗೊಂಡು ಮಾನ್ಯ ಭೂ ದಾಖಲಾತಿಗಳ ವಿಭಾಗ ಬಸವನ ಬಾಗೇವಾಡಿ ಇವರಿಗೆ ಹೂವಿನ ಹಿಪ್ಪರಗಿ ಗ್ರಾಮದ ಜಮೀನುಗಳು ಮತ್ತು ವಾದಿ ಮತ್ತು ನಮ್ಮ ಮಾಲ್ಕಿ ಹಕ್ಕಿನ ಕ್ಷೇತ್ರಗಳನ್ನು ಅಳತೆ ಮಾಡಲು ಅರ್ಜಿ ಕೊಟ್ಟಿದ್ದ ಅನ್ನುವುದು ನಿಜವಿದ್ದು, ಆದರೆ ವಾದಿಯು ತಮ್ಮ ಮನೆತನದ ಮಾಲ್ಕಿಯ ಜಮೀನ ಸ.ನಂ. 296 ರಲ್ಲಿ ಆದ ಎಲ್ಲ ಪಟ್ಟಿಗಳನ್ನು ಅಳತೆ ಮಾಡುವ ಸಲುವಾಗಿ ಅರ್ಜಿ ಸಲ್ಲಿಸಿರುವುದಿಲ್ಲ. ಅದೇ ಪ್ಯಾರಾದಲ್ಲಿ ಮುಂದುವರೆದು ನಾವು ಸಾಮೂಹಿಕವಾಗಿ ವಾದಿಯ ಮಾಲ್ಕಿ ಹಕ್ಕಿನ ದಕ್ಷಿಣ ಭಾಗದಲ್ಲಿ ಹಾತ ನಕಾಶೆಯಲ್ಲಿ ತೋರಿಸಿದಂತೆ 9 ಗುಂಟೆ ಕ್ಷೇತ್ರವನ್ನು ಅತೀಕ್ರಮಣ ಮಾಡಿದ ಬಗ್ಗೆ ವಿಷಯ ಸಂಪೂರ್ಣ ಸುಳ್ಳು ಇರುತ್ತದೆ.

ವಾದಿಯು ವಾದ ಪತ್ರದ ಪ್ಯಾರಾ ನಂ. 4 ರಲ್ಲಿ ವಿವರಿಸಿದಂತೆ ಪಿಟಿ ಶೀಟ ಪ್ರಕಾರ ವಾದಿಯು ನಮಗೆ 9 ಗುಂಟೆ ಕ್ಷೇತ್ರವನ್ನು ತನ್ನ ಸ್ವಾಧೀನಕ್ಕೆ ಕೊಡಲು ಮತ್ತು ಆ ಕ್ಷೇತ್ರಕ್ಕೆ ತಾನು ಮಾಲೀಕನಿದ್ದೇನೆ ಅಂತಾ ಪ್ರತಿಪಾಧಿಸಿದನು ಅಂತಾ ಹೇಳಿ ಬರೆಯಿಸಿದ ಸಂಗತಿ

M.M. Nadagouda

No. of Corrections Nil
Sheristedar (Adm)

ಸುಳ್ಳು ಇರುತ್ತದೆ. ಆಗ ನಾವು ಅತೀಕ್ರಮಣವಾದ 9 ಗುಂಟೆ ಕ್ಷೇತ್ರಕ್ಕೆ ವಾದಿಯ ಮಾಲ್ಕಿ ಹಕ್ಕನ್ನು ಅಲ್ಲಗಳೆದು 9 ಗುಂಟೆ ಕ್ಷೇತ್ರವನ್ನು ಕಬ್ಜಾ ಕೊಡಲು ನಿರಾಕರಿಸಿದರು ಅಂತಾ ಹೇಳಿ ಬರೆಯಿಸಿದ ಸಂಗತಿ ಸಂಪೂರ್ಣ ಸುಳ್ಳು ಇರುತ್ತದೆ.

ವಾದಿಗೆ ಈ ದಾವಾ ಮಾಡಲು ಯಾವುದೇ ದಾವಾ ಕಾರಣವೇ ಉಂಟಾಗಿರುವುದಿಲ್ಲ. ಕೇವಲ ಖೊಟ್ಟಿಯಾಗಿ ಅಳತೆ ಮಾಡಿಸಿದ ಪಿಟಿ ಶೀಟನ್ನು ಆಧಾರವಾಗಿಟ್ಟುಕೊಂಡು ಕಾಲ್ಪನಿಕ ಕಾರಣಗಳನ್ನು ಹುಟ್ಟಿಸಿಕೊಂಡು ಈ ದಾವಾ ಮಾಡಿದ್ದು, ಅದು ಕಾನೂನಿನಡಿಯಲ್ಲಿ ಊರ್ಜಿತವಾಗಲಾರದು.

ವಾದಿಯು ವಾದ ಪತ್ರದ ಪ್ಯಾರಾ ನಂ. 7 ರಲ್ಲಿ ವಿವರಿಸಿದಂತೆ ದಾವಾ ಸ್ವತ್ತುಗಳ ಮೌಲ್ಯವನ್ನು ನಿರ್ಧರಿಸಿ ಸರಿಯಾದ ಕೋರ್ಟ ಫೀ ಭರಾಯಿಸಿರುವುದಿಲ್ಲ. ಹಾಗೇ ಕೋರ್ಟ ಫೀ ಭರಾಯಿಸದ ವಿನಃ ವಾದಿಯ ದಾವೆಯು ಕಾಯ್ದೆಯಿಂದ ನಡೆಯಲಾರದು.

ವಾದಿಯು ವಾದಪತ್ರದ ಪ್ಯಾರಾ ನಂ. 8 ರ ವಿನಂತಿ ಕಾಲಂದಲ್ಲಿ ವಿವರಿಸಿದ ಯಾವುದೇ ಮಾಗಣಿಗಳನ್ನು ಕಾಯ್ದೆಯಿಂದ ಮಂಜೂರ ಮಾಡಲು ಬರಲಾರದು.

ಹೂವಿನ ಹಿಪ್ಪರಗಿ ಗ್ರಾಮದ ಜಮೀನ ಸ.ನಂ. 296 ಇದು ವಾದಿಯ ಮನೆತನದ ಮೂಲ ಆಸ್ತಿ ಇದ್ದು, ಅದರ ಒಟ್ಟು ಕ್ಷೇತ್ರ 11 ಎಕರೆ 32 ಗುಂಟೆ ಇರುತ್ತದೆ. ಸದರಿ ಸ.ನಂ. 296 ಕ್ಷೇತ್ರ 11 ಎಕರೆ 32 ಗುಂಟೆ ಕ್ಷೇತ್ರದಲ್ಲಿ 296/1 ಕ್ಷೇತ್ರ 05 ಎಕರೆ 36 ಗುಂಟೆ, ಸ.ನಂ. 296/2 ಕ್ಷೇತ್ರ 02 ಎಕರೆ 28 ಗುಂಟೆ, ಜಮೀನ ಸ.ನಂ. 296/3 ಕ್ಷೇತ್ರ 03 ಎಕರೆ 08 ಗುಂಟೆ ಹೀಗೆ 3 ಪಟ್ಟಿಗಳಾಗಿದ್ದು ಇರುತ್ತದೆ. ಆದರೆ ವಾದಿಯು ತನಗೆ ಅನುಕೂಲ ಆಗುವ ಹಾಗೇ ತನ್ನ ಮಾಲ್ಕಿಯ ಜಮೀನ ಸ.ನಂ. 296/1 ಕ್ಷೇತ್ರ 05 ಎಕರೆ 36 ಗುಂಟೆ ಕ್ಷೇತ್ರವನ್ನು ಮಾತ್ರ ತನ್ನ ಹಾತ ನಕಾಶೆಯಲ್ಲಿ ಕಾಣಿಸಿದ್ದು, 296 ರಲ್ಲಿ ಆದ 3 ಪಟ್ಟಿಗಳನ್ನು ಹಾತ ನಕಾಶೆಯಲ್ಲಿ ಕಾಣಿಸಿರುವುದಿಲ್ಲ ಹಾಗೂ 296/2, 296/3 ರ ಮಾಲೀಕರನ್ನು ವ ಅವರ ಅಣ್ಣ ತಮ್ಮಂದಿರರನ್ನು ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಅವರನ್ನು ಪಕ್ಷಗಾರರನ್ನಾಗಿ ಮಾಡದ ವಿನಃ ವ ಸದರಿ ಪಟ್ಟಿಗಳನ್ನು ಈ ದಾವೆಯಲ್ಲಿ ಸೇರಿಸದ ವಿನಃ ಈ ದಾವೆಗೆ ನಾನ ಜ್ಯಾಯಿಂಡರ್ ಆಫ

NM

M. M. Nalagoli

ನೆಸಸರಿ ಪಾರ್ಟಿ ಬಾಧಾ ಬರುತ್ತದೆ ಆ ಕಾರಣಕ್ಕಾಗಿ ವಾದಿಯ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಲು ವಿನಂತಿ ಅದೆ.

ವಾದಿಯು ಜಮೀನ ಸ.ನಂ. 296 ರಲ್ಲಿ ಬರುವ 3 ಪಟ್ಟಿಗಳ ಒಟ್ಟು 11 ಎಕರೆ 32 ಗುಂಟೆ ಕ್ಷೇತ್ರವನ್ನು ಅಳತೆ ಮಾಡಿಸಿರುವುದಿಲ್ಲ. ಕೇವಲ ತನ್ನ ಪಟ್ಟಿಯನ್ನಷ್ಟೇ ಅಳತೆ ಮಾಡಿಸಿದ್ದು, ಅದು ಬೇಕಾಯ್ದೆಶೀರ ಇದ್ದು, ಅದನ್ನು ನಂಬಲು ಬರಲಾರದು. ವಾದಿ ಅನ್ನುವ 9 ಗುಂಟೆ ಕ್ಷೇತ್ರವು ಅವರ ಸಹೋದರರ ಪಟ್ಟಿಗಳಾದ ಜಮೀನ ಸ.ನಂ. 296/2, 296/3 ರಲ್ಲಿ ಬರುತ್ತದೆ ವಿನಾಕಾರಣ ನನಗೆ ತೊಂದರೆ ಕೊಡಬೇಕೆನ್ನುವ ದುರುದ್ದೇಶದಿಂದ ಈ ದಾವಾ ದಾಖಲಿಸಿದ್ದು ಇರುತ್ತದೆ.

ನಮ್ಮ ಜಮೀನದಲ್ಲಿ 3 ಪಟ್ಟಿಗಳಾಗಿದ್ದು, ಸದರಿ 3 ಪಟ್ಟಿಗಳ ಕ್ಷೇತ್ರ 11 ಎಕರೆ 08 ಗುಂಟೆ ಇರುತ್ತದೆ. ವಾದಿಯ ಮಾಲ್ಕಿಯ ಜಮೀನ ಸ.ನಂ. 296/1 ಜಮೀನನ್ನು ಸರ್ವೆ ಮಾಡಿಸುವ ಕಾಲಕ್ಕೆ ನಾವು ಜಮೀನ ಸ.ನಂ. 296 ರ 11 ಎಕರೆ 32 ಗುಂಟೆ ಕ್ಷೇತ್ರವನ್ನು ಅಳತೆ ಮಾಡಲು ವಿನಂತಿಸಿಕೊಂಡಾಗ್ಯೂ ಕೂಡಾ ನಮ್ಮ ಮಾತಿಗೆ ಬೆಲೆ ಕೊಡದೇ ವಾದಿಯು ಸರ್ವೆಯರರೊಂದಿಗೆ ಶಾಮೀಲಾಗಿ 296 ರ ಒಂದೇ ಪಟ್ಟಿಯನ್ನು ಅಳತೆ ಮಾಡಿಸಿ ನಾವು ನಮ್ಮ ಜಮೀನದಲ್ಲಿ 9 ಗುಂಟೆ ಕ್ಷೇತ್ರವನ್ನು ಅತೀಕ್ರಮಣ ಮಾಡಿರುತ್ತೇವೆ ಅಂತಾ ತನಗೆ ಅನುಕೂಲ ಆಗುವ ಹಾಗೇ ಹೇಳಿ ಬರೆಯಿಸಿದ್ದು ಅದನ್ನು ನಾನು ಸಾರಾ ಸಗಟವಾಗಿ ಅಲ್ಲಗಳೆಯುತ್ತೇನೆ.

ನಾವು ವಾದಿಯ 1 ನೇ ಪಟ್ಟಿಯನ್ನು ಅಳತೆ ಮಾಡಿಸುವ ಕಾಲಕ್ಕೆ ವಾದಿಗೆ ಹಾಗೂ ಸರ್ವೆಯರರಿಗೆ ನಮ್ಮ 3 ಪಟ್ಟಿಗಳನ್ನು ಹಾಗೂ ವಾದಿಯ ಸಹೋದರರ ಇನ್ನೂ ಎರಡು ಪಟ್ಟಿಗಳನ್ನು ಎಲ್ಲವೂ ಒಟ್ಟಿಗೆ ಕೂಡಿ ಅಳತೆ ಮಾಡಿಸೋಣ ಅಂತಾ ಹೇಳಿದಾಗ್ಯೂ ಕೂಡಾ ನಮ್ಮ ಮಾತನ್ನು ಅಲ್ಲಗಳೆದು ವಾದಿಯು ತನಗೆ ಅನುಕೂಲ ಆಗುವ ಹಾಗೇ ತನ್ನ ಪಟ್ಟಿಯನ್ನಷ್ಟೇ ಅಳತೆ ಮಾಡಿಸಿ ತನ್ನ ಜಮೀನದಲ್ಲಿ ನಾವು ಅತೀಕ್ರಮಣ ಮಾಡಿರುತ್ತೇವೆ ಅಂತಾ ಹೇಳಿ ಬರೆಯಿಸಿದ್ದು ಅದು ಕಾನೂನಿನಡಿಯಲ್ಲಿ ಊರ್ಜಿತವಾಗಲಾರದು. ಆ ಕಾರಣಕ್ಕಾಗಿ ವಾದಿಯರ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಲು ವಿನಂತಿ ಅದೆ.

ವಾದಿಯು ತನ್ನ ವಾದಪತ್ರದಲ್ಲಿ ಜಮೀನ ಸ.ನಂ. 296 ರಲ್ಲಿ 3 ಪಟ್ಟಿಗಳಾಗಿರುತ್ತವೆ ಅಂತಾ ಎಲ್ಲಿಯೂ ಕಾಣಿಸಿರುವುದಿಲ್ಲ. ವಾದಿಯ ಮೂಲ ಸರ್ವೆ ನಂ.

No. of Corrections Nil

Sheristedar

M. M. Nadagouda.

296 ರಲ್ಲಿ ಬರತಕ್ಕಂತಹ ಎಲ್ಲ 3 ಪಟ್ಟಿಗಳನ್ನು ಅಳತೆ ಮಾಡಿಸಿದಾಗ ವಾದಿಯ ಕ್ಷೇತ್ರ ಎಷ್ಟು ಇರುತ್ತದೆ ಅನ್ನುವುದರ ಬಗ್ಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ ಹಾಗೇ ಮಾಡದೇ ಕೇವಲ ಪ್ರತಿವಾದಿಯರ ಮಾಲ್ಕಿ ಜಮೀನನ್ನು ಅತೀಕ್ರಮಿಸಿದ್ದಾರೆ ಅಂತಾ ಹೇಳಿ ಅವರ ಜಮೀನನ್ನು ಎತ್ತಿ ಹಾಕಬೇಕೆನ್ನುವ ದುರುದ್ದೇಶದಿಂದ ಖೊಟ್ಟಿ ದಾವಾ ದಾಖಲ ಮಾಡಿದ್ದು ಅದನ್ನು ನಂಬಲು ಬರಲಾರದು.

ಸರ್ವೆಯರರು ಅಳತೆ ಮಾಡುವ ಕಾಲಕ್ಕೆ ನಾವು ಒಂದೇ ಪಟ್ಟಿಯನ್ನು ಅಳತೆ ಮಾಡಬೇಡಿರಿ ಅಂತಾ ವಿನಂತಿಸಿಕೊಂಡಾಗ್ಯೂ ಕೂಡಾ ಅಳತೆ ಮಾಡಲು ಬಂದ ಸರ್ವೆಯರರು ನಮ್ಮ ಮಾತನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ವಾದಿಯ ಹೇಳಿಕೆಯ ಪ್ರಕಾರ ಅವನ ಒಂದೇ ಪಟ್ಟಿಯನ್ನು ಅಳತೆ ಮಾಡಿದ್ದು ಅದು ಬೇಕಾಯ್ದೆಶೀರ ಇದ್ದು, ಅದನ್ನು ನಂಬಲು ಬರಲಾರದು. ತಾಲೂಕಾ ಸರ್ವೆಯರರು ಅಳತೆ ಮಾಡಿದ ಮೇಲೆ ನಿಮ್ಮ ಜಮೀನದಲ್ಲಿ 9 ಗುಂಟೆ ಕ್ಷೇತ್ರ ನನಗೆ ಬಂದಿದ್ದು ಇರುತ್ತದೆ ಅದನ್ನು ಕಬ್ಜಾಕ್ಕೆ ಕೊಡಿರಿ ಅಂತಾ ಎಂದೂ ನಮ್ಮನ್ನು ವಾದಿಯು ಕೇಳಿರುವುದಿಲ್ಲ. ಅನಧೀಕಾರದಿಂದ ನಮಗೆ ತೊಂದರೆ ಕೊಡಬೇಕೆನ್ನುವ ದುರುದ್ದೇಶದಿಂದ ಖೊಟ್ಟಿಯಾಗಿ ಶೀಟನ್ನು ತಯಾರಿಸಿಕೊಂಡು ಅದರ ಪ್ರಕಾರ ನನಗೆ 9 ಗುಂಟೆ ಕ್ಷೇತ್ರ ಬರುತ್ತದೆ ಅಂತಾ ಇದೊಂದು ಸುಳ್ಳು ದಾವಾ ದಾಖಲ ಮಾಡಿದ್ದು ಅದು ಕಾಯ್ದೆಯಿಂದ ಊರ್ಜಿತವಾಗಲಾರದು.

ನಾವು ವಾದಿಯ ಜಮೀನದಲ್ಲಿ ಯಾವುದೇ ರೀತಿಯಿಂದಲೂ ಅತೀಕ್ರಮಣ ಮಾಡಿರುವುದಿಲ್ಲ. ವಾದಿಯು ಅನ್ನುವ ಹಾಗೇ ಅತೀಕ್ರಮಣ ಮಾಡಿದ 9 ಗುಂಟೆ ಕ್ಷೇತ್ರವನ್ನು ಬಿಟ್ಟುಕೊಡುವ ಪ್ರಶ್ನೆಯೇ ಉದ್ಭವಿಸಲಾರದು. ಕೇವಲ ಕಾಲ್ಪನಿಕ ಕಾರಣಗಳನ್ನು ಸೃಷ್ಟಿಸಿಕೊಂಡು ನಮಗೆ ತೊಂದರೆ ಕೊಡಬೇಕೆಂದು ನಮ್ಮ ಜಮೀನಕ್ಕೆ ಸಂಬಂಧಿಸಿದಂತೆ ಯಾವುದೇ ಹಕ್ಕು ಹಿತಾಸಕ್ತಿಗಳು ಇರದೇ ಇದ್ದಾಗ್ಯೂ ಕೂಡಾ ಈ ದಾವೆ ಮಾಡಿದ್ದು ಅದನ್ನು ಖರ್ಚು ಸಹಿತ ವಜಾಗೊಳಿಸಬೇಕು.

ಪ್ರತಿವಾದ ಪತ್ರದೊಂದಿಗೆ ದಾಖಲಾತಿಗಳನ್ನು ಹಾಜರಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಗಳೆಂದು ಗುರ್ತಿಸಲು ಜೊತೆಗೆ ಪ್ರತಿವಾದ ಪತ್ರವನ್ನು ನನ್ನ ಮಾಗಣಿಯಂತೆ ಮಂಜೂರಗೊಳಿಸಬೇಕೆಂದು ಮಾಡಿದ ವಿನಂತಿ ಪ್ರಮಾಣ ಪತ್ರ.

No. of Corrections
Nil

Sheristedar (Adm

M. M. Nadagouda

ಮೇಲೆ ಬರೆದ ಯಾವತ್ತೂ ಮಾಹಿತಿ ವ ಸಂಗತಿಗಳು ನಾನೇ ಹೇಳಿ ಬರೆಯಿಸಿದ್ದು ಅವು ನಿಜವಿದ್ದು, ಅವುಗಳನ್ನು ಓದಿ ಕೇಳಿ ನಿಜವೆಂದು ಒಪ್ಪಿ ನಾನು ನನ್ನ ಸಹಿ ಮಾಡಿರುತ್ತೇನೆ.

ಬಸವನ ಬಾಗೇವಾಡಿ

ದಿನಾಂಕ : 16-06-2026

M. M. [signature]

ಪ್ರತಿಜ್ಞಾಧಾರಕ

ನನಗೆ ಸದರಿಯವರ ಪರಿಚಯವಿದೆ.

[signature]

ಶ್ರೀ.ವ್ಹಿ.ಬಿ.ಮರ್ತೂರ

ವಕೀಲರು ಬಸವನಬಾಗೇವಾಡಿ

... affirmed / sworn to before me this the 16th day of June 2026 ... contents of the affidavit ... Deponent Ramappa ... Sri. VBM Adv.

Place: B. Bagewadi

Dated 16.06.2026

Civil Judge ...

Sheristedar ...

ಓ.ಎಸ್‌ಃ 349/2019
ಡಿ.ಡಬ್ಲ್ಯೂ: 01

**ದಿನಾಂಕಃ 16.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಮುಖ್ಯವಿಚಾರಣೆ ಪ್ರತಿವಾದಿಯರ ಪರ ಶ್ರೀ. ವಿ.ಬಿ.ಎಂ. ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ. ಸದರಿ ಸಂಗತಿಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಅದರಲ್ಲಿ ಬರೆದಿರುವ ಸಂಗತಿಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

**ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

16/6/26

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**